[ **Govt. of Karnataka** **C.R.P. 67]**

| |
|---|
| **Deposition Sheets (RP.No.57) Form No.4** |

**IN THE COURT OF II Addl. CIVIL JUDGE & J.M.F.C., KARKALA.**

**Criminal Case No. 400/2017**

**ಪಿ.ಡಬ್ಲು : 9** **ಸಿ.ಡಬ್ಲು : 11**

ಸಾಕ್ಷಿದಾರನ ಹೆಸರು : ಕರುಣಾಕರ ಶೆಟ್ಟಿ
ತಂದೆಯ ಹೆಸರು : ಸಂಜೀವ ಶೆಟ್ಟಿ
ಪ್ರಾಯ : 53 ವರ್ಷ
ಉದ್ಯೋಗ : ಖಾಸಗಿ
ವಾಸ : ಮುಂಡ್ಕೂರು

ದಿನಾಂಕ 10.04.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಸಾಕ್ಷಿಯು ವಿಸಿ ಮುಖಾಂತರ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ಆರೋಪಿಯು ಕಳವು ನಡೆಸಿರುವ ಘಟನಾ ಸ್ಥಳವನ್ನು ತೋರಿಸಿಕೊಡುವ ಸಮಯ ತಯಾರಿಸಿದ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದ್ರಿ ಮಹಜರನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಸದ್ರಿ ಸಹಿಯನ್ನು ಸುಮಾರು 3-4 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ-10 ಕ್ಕೆ ಸಹಿ ಮಾಡುವಾಗ ಚಾಸಾ-12 ರವರು ಹಾಜರಿದ್ದರು. ನನ್ನನ್ನು ಆರೋಪಿ ತೋರಿಸಿಕೊಟ್ಟ ಸ್ಥಳಗಳಿಗೆ ಪೊಲೀಸರು ಕರೆದುಕೊಂಡು ಹೋಗಿರುತ್ತಾರೆ. ಅ ಸಮಯದಲ್ಲಿ ಆರೋಪಿ ಹಾಗೂ ಚಾಸಾ-12 ರವರು ಇದ್ದರು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರುಃ-**

2. ದಿಃ11.12.2016 ರಂದು ಆರೋಪಿಯ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿರುವಂತೆ ಆರೋಪಿ ಕಳುವು ನಡೆಸಿರುವ ಘಟನಾ ಸ್ಥಳವನ್ನು ತೋರಿಸಿಕೊಡುವ ಸಮಯ ನನ್ನನ್ನು ಹಾಗೂ ಚಾಸಾ-12 ರವರನ್ನು ಪಂಚರಾಗಿ ಬರಮಾಡಿಕೊಂಡು ಕುಂಟಾಡಿಯ ಕೈಕಂಬ, ಬೈಲೂರು, ಗುಡ್ಡೆಯಂಗಡಿ, ಕಾರ್ಕಳದ ಗಾಂಧಿಮೈದಾನ, ಕಾರ್ಕಳ ಸದಾನಂದ ಕಾಮತ್ ರಸ್ತೆ, ಕಾರ್ಕಳದಿಂದ ದುರ್ಗಾ ಗ್ರಾಮಕ್ಕೆ ಹೋಗುವ ರಸ್ತೆ, ಹಾಗೂ ಮಿಯಾರಿಗೆ ಹೋಗುವ ರಸ್ತೆ ಮತ್ತು ಹೆಬ್ರಿಯಿಂದ ಅಜೆಕಾರು ಕಡೆಗೆ ಹೋಗುವ ರಸ್ತೆ ಸ್ಥಳಗಳಿಗೆ ಪೊಲೀಸರು ನಮ್ಮನ್ನು ಕರೆದುಕೊಂಡು ಹೋಗಿ ಸ್ಥಳದಲ್ಲಿ ಮಹಜರು ತಯಾರಿಸಿದ್ದು ಸದ್ರಿ ಮಹಜರುಗಳಿಗೆ ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ.

<u>ಪಾಟೀ ಸವಾಲು</u> ಃ ಆರೋಪಿ ಪರ ಃ ಶ್ರೀ ಕೆ ಬಿ ಎಸ್ ವಕೀಲರಿಂದ ಃ

ನನ್ನನ್ನು ಮತ್ತು ಚಾಸಾ-**12** ರವರನ್ನು ಪೊಲೀಸರು ದಿನಾಂಕ **11.12.2016** ರಂದು ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿ ಆರೋಪಿಯನ್ನು ನನಗೆ ಪರಿಚಯಿಸಿದರು ಎಂದರೆ ಸರಿಯಲ್ಲ. ಈ ದಿನ ನನಗೆ ವಿಸಿ ಮೂಲಕ ತೋರಿಸಿದ ಆರೋಪಿಯೇ ಪೊಲೀಸರು ನನಗೆ ಠಾಣೆಯಲ್ಲಿ ತೋರಿಸಿದ ವ್ಯಕ್ತಿ ಎಂದರೆ ಸರಿಯಲ್ಲ. ಪೋಲೀಸರ ಠಾಣೆಯಲ್ಲಿ ನನಗೆ ಆರೋಪಿಯ ಮೇಲೆ ಪ್ರಕರಣಗಳನ್ನು ದಾಖಲಿಸಲು ಸಾಕ್ಷಿದಾರನಾಗಿ ಬರಬೇಕೆಂದು ಕೇಳಿಕೊಂಡಿರುತ್ತಾರೆ ಮತ್ತು ದಾಖಲೆಗಳಿಗೆ ಸಹಿ ಮಾಡುವಂತೆ ತಿಳಿಸಿರುತ್ತಾರೆ ಎಂದರೆ ಸರಿ. ದಿಃ **11.12.2016** ರಂದು ನಾನು ಮತ್ತು ಚಾಸಾ-**17** ರವರು ದಾಖಲೆಗಳಿಗೆ ಸಹಿ ಮಾಡಿರುತ್ತೇವೆ. ನಿಪಿ-**10** ರಲ್ಲಿ ಏನು ಬರೆದಿದೆ ಎನ್ನುವ ವಿಚಾರ ಗೊತ್ತಿಲ್ಲ ಮತ್ತು ಅದನ್ನು ಪೊಲೀಸರು ಓದಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ಹಾಗೂ ಚಾಸಾ-**12** ರವರನ್ನು ಹೊರತುಪಡಿಸಿ ಬೇರೆ ಯಾರು ನಿಪಿ-**10** ಕ್ಕೆ ಸಹಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ದಾಖಲೆಗಳನ್ನು ತಯಾರು ಮಾಡುವಾಗ ಠಾಣೆಯಲ್ಲಿ ಒಂದು ಗಂಟೆ ಇದ್ದೆ. ನಿಪಿ-**10** ಯಾರು ಬರೆದಿರುತ್ತಾರೆ ಎಂದು ಗೊತ್ತಿಲ್ಲ. **9** ಗ್ರಾಮಗಳಲ್ಲಿ ಕಳುವಾಗಿರುವ ಬಗ್ಗೆ ಠಾಣೆಯಲ್ಲಿ ಮುಖ್ಯ ಪೇದೆಯವರು ತಿಳಿಸಿದ್ದು ಸ್ಥಳಗಳನ್ನು ತಿಳಿಸಿರುತ್ತಾರೆ. ಪೊಲೀಸರ ಕೋರಿಕೆಯ ಮೇರೆಗೆ **9** ಗ್ರಾಮಗಳಿಗೆ

ಹೋಗಿರುತ್ತೇನೆ. ಪೊಲೀಸ್ ಠಾಣೆಯಿಂದ ಬೆಳಿಗ್ಗೆ 11.00 ಗಂಟೆಗೆ ಹೊರಟಿರುತ್ತೇವೆ. ಪ್ರಥಮವಾಗಿ ಮುಂಡ್ಕೂರು ಗ್ರಾಮಕ್ಕೆ ಹೋಗಿರುತ್ತೇವೆ. ಮುಂಡ್ಕೂರು ಗ್ರಾಮದಲ್ಲಿ ಕಳುವಾದ ಮನೆಯ ಮಾಲಕರು ಸುರೇಶ್ ಜೋಗಿಯಾಗಿರುತ್ತಾರೆ. ಅಲ್ಲಿ ಸೊತ್ತುಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ. ಸದ್ರಿ ಮನೆಯ ಮಾಲಕರು ಸುರೇಶ್ ಜೋಗಿ ಎನ್ನುವ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಸುರೇಶ್ ಜೋಗಿ ಮನೆಯ ಸ್ಥಳ ತನಿಖೆ ಮಾಡುವಾಗ ನನ್ನನ್ನು ಮತ್ತು ಚಾಸಾ-12 ರವರನ್ನು ಹೊರತುಪಡಿಸಿ ನೆರೆಕರೆಯವರನ್ನು ಕರೆಸಿರುವುದಿಲ್ಲ. ಸುರೇಶ್ ಜೋಗಿಯವರ ಮನೆ ನಂಬ್ರ ನನಗೆ ಹೇಳಲು ಸಾಧ್ಯವಿಲ್ಲ. ಸದ್ರಿ ಮನೆ ಪರಿಶೀಲಿಸುವ ಸಮಯದಲ್ಲಿ ಆರೋಪಿಯು ಜೀಪಿನಲ್ಲಿದ್ದರು. 9 ಗ್ರಾಮಗಳಲ್ಲಿ ಯಾವ ಯಾವ ಸ್ಥಳಗಳು ಎಂದು ನನಗೆ ಹೇಳಲು ಸಾಧ್ಯವಿಲ್ಲ. ಪ್ರತಿ ಸ್ಥಳಗಳಲ್ಲಿ ಪೊಲೀಸರು 15 ನಿಮಿಷ ಇದ್ದರು. 9 ಮನೆಗಳಿಗೆ ಪೊಲೀಸರ ಜೊತೆ ಹೋಗಿದ್ದೇನೆ. 2 ನೇ ಬಾರಿ ಯಾರ ಮನೆಗೆ ಹೋಗಿದ್ದೆ ಎಂದು ನೆನಪಿಲ್ಲ. ಸದ್ರಿ 9 ಮನೆಗಳು ಯಾರು ಯಾರಿಗೆ ಸಂಬಧಪಟ್ಟ ಮನೆಗಳು ಎಂದು ನನಗೆ ಹೇಳಲು ಸಾಧ್ಯವಿಲ್ಲ. ಮುಂಡ್ಕೂರು ನಿಂದ ಇತರ ಬೇರೆ ಬೇರೆ ಕಳುವಾದ ಮನೆಗಳು ಎಷ್ಟು ಅಂತರದಲ್ಲಿ ಇದೆ ಎಂದು ಹೇಳಲು ಸಾಧ್ಯವಿಲ್ಲ. ಒಂದುವರೆ ಗಂಟೆಯೊಳಗೆ 9 ಮನೆಗಳಿಗೆ ಭೇಟಿ ಕೊಟ್ಟಿದೆ ಎಂದರೆ ಸಾಕ್ಷಿಯು ಸಮಯ ಗೊತ್ತಿಲ್ಲ ಎಂದು ನುಡಿಯುತ್ತಾರೆ. 9 ಮನೆಗಳಿಗೆ ಭೇಟಿಕೊಟ್ಟು ಆದ ನಂತರ ಪೊಲೀಸರು ನನ್ನನ್ನು ಮುಂಡ್ಕೂರಿಗೆ ಬಿಟ್ಟಿರುತ್ತಾರೆ. ಪೊಲೀಸರೊಂದಿಗೆ ಒಳ್ಳೆಯ ಬಾಂದವ್ಯ ಇದ್ದ ಕಾರಣ 9 ಮನೆಗಳಿಗೆ ಹೋದ ವಿಚಾರ ಸತ್ಯಕ್ಕೆ ದೂರವಾದ ವಿಚಾರ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ